



# ಬರ್ನಾರ್ಡಿನ್ ಇವರಿಸ್ಟೊ ಅವರ 'ಗರ್ಲ್, ವುಮನ್, ಅದರ್': ಕಾವ್ಯ ಲಯದ ಗದ್ಯ ಕಾದಂಬರಿ

**2019**ರ ಬುಕರ್ ಪ್ರಶಸ್ತಿಯನ್ನು ಇಬ್ಬರು ಲೇಖಕಿಯರು ಹಂಚಿಕೊಂಡಿದ್ದಾರೆ. ಮಾರ್ಗರೆಟ್ ಅಟ್‌ವುಡ್ ಕಾದಂಬರಿ 'ದ ಟೆಸ್ಟಮಂಟ್' ಮತ್ತು ಬರ್ನಾರ್ಡಿನ್ ಇವರಿಸ್ಟೋ ಅವರ ಕಾದಂಬರಿ 'ಗರ್ಲ್, ವುಮನ್, ಅದರ್'ಗೆ ಈ ಪ್ರಶಸ್ತಿ ಸಂದಿದೆ.

ಲೇಖಕಿ ಇವರಿಸ್ಟೋ ಬ್ರಿಟನ್ ಸಂಜಾತೆ. ಅವರ 'ಗರ್ಲ್, ವುಮನ್, ಅದರ್' ಹೊಸತನದ ಕಾದಂಬರಿ. ಈಕೆಯ ತಂದೆ ಬ್ರಿಟಿಶ್, ತಾಯಿ ನೈಜೀರಿಯನ್. ಈಕೆ ಹುಟ್ಟಿದ್ದು ಬೆಳೆದಿದ್ದು ಎಲ್ಲ ಬ್ರಿಟನ್ನಿನಲ್ಲಿಯೇ ಆದರೂ ಅರವತ್ತರ ಹರಯದ ಈಕೆ ಅಲ್ಲಿ ಸಮಾನತೆಗಾಗಿ ಹೋರಾಡುತ್ತಿರುವ ಕಾರ್ಯಕರ್ತೆಯಾಗಿ ಹೆಸರು ಮಾಡಿರುವಾಕೆ.

ಈ ಕಾದಂಬರಿಯ ಹೊಸತನ ಮೂರು ಬಗೆಯದು. ಒಂದು, ಇಲ್ಲಿನ ಪಾತ್ರಗಳೆಲ್ಲವೂ ಮುಂದಿನ ದಶಕದ ಸ್ತ್ರೀಪಾತ್ರಗಳೆಂದು ಹೇಳುವುದೇ ಸೂಕ್ತ. ಇವರ ದಿಟ್ಟ, ನೇರ ಮತ್ತು ನಿಷ್ಠುರವಾದ ನಿಲುವುಗಳು ಕೆಲವೊಮ್ಮೆ ಬೆಚ್ಚಿಬೀಳಿಸುವಷ್ಟು ಖಾರವಾಗಿವೆ. ತಮ್ಮ ಬದುಕು–ಭವಿಷ್ಯವನ್ನೇ ಧಾರೆಯೆರೆದು ಮಕ್ಕಳನ್ನು ಬೆಳೆಸುವ ಇವತ್ತಿನ ತಂದೆ ತಾಯಿಯರು ಇಂಥ ಮಕ್ಕಳನ್ನು 'ನಿಭಾಯಿಸಲು' ಇನ್ನಷ್ಟೇ